

## ಕೆಟ್ಟ ಕನಸು ಏಕೆ?

'ಸುಧಾ' ಮೇ30ರ ಮುಖಪುಟ ಲೇಖನದಲ್ಲಿ 'ಕೆಟ್ಟ ಕನಸುಗಳು ಏಕೆ ಬೀಳುತ್ತವೆ?' ಎಂಬುದಕ್ಕೆ ಕಾರಣಗಳನ್ನು ನೀಡಿರುವ ನಳಿನಾ ಡಿ. ಅವರು ನಿವಾರಣೆ ಬಗ್ಗೆ ವಿವರವಾದ ಮಾಹಿತಿ ನೀಡಿದ್ದಾರೆ.

–ಸು.ವಿಜಯಲಕ್ಷ್ಮಿ, ಶಿವಮೊಗ್ಗ/ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಪಿ.ಗೋವಿಂದರಾಜ್, ಶಿವಮೊಗ್ಗ

## ಗಮನ ಸೆಳೆದ ಸಂಗತಿ

'ಯೋಚಿಸುವ ಯಂತ್ರಕ್ಕೆ ಒಂದಿಷ್ಟು ಊಟ ಕೊಡಿ' ಎಚ್.ಬಿ.ಇಂದ್ರ ಕುಮಾರರ ಲೇಖನ ಗಮನಸೆಳೆಯಿತು.

–ವಿಭಾ ಮುರಳೀಧರ್, ತುಮಕೂರು/ ನಾರಾಯಣ ಯಾಜಿ, ಶಿರಾಲಿ

## ಅಧ್ಯಾತ್ಮದತ್ತ ಸೆಳೆತ

'ಬುದ್ದನ ಮುದ್ರೆ' ಕುರಿತ ಕೇಶವ ಕುಡ್ಲ ಅವರ ಲೇಖನ ಎಂತಹ ನಾಸ್ತಿಕರನ್ನೂ ಅಧ್ಯಾತ್ಮದತ್ತ ಎಳೆಯುವಂತಹ ಶಕ್ತಿ ಹೊಂದಿದೆ. ಬನವಾಸಿ ಹಾಗೂ ಬುದ್ಧ –ಈ ಎರಡೂ ಲೇಖನಗಳು ಸಂಗ್ರಹಯೋಗ್ಯವಾಗಿವೆ.

–ದೀಪ್ತಿ ರಮೇಶ್, ಮೈಸೂರು

## ಚಿತ್ತಾಕರ್ಷಕ ಬನವಾಸಿ

ಬನವಾಸಿ ಕುರಿತ ಅಶೋಕ್‌ಕುಮಾರ್ ಲೇಖನ ಚಿತ್ತಾಕರ್ಷಕ.

–ನೆ.ಲ.ರಾಂ, ಕೋಟೇಶ್ವರ ಸೂರ್ಯ ನಾರಾಯಣರಾವ್, ಬೆಂಗಳೂರು

## ಕತ್ತೆಯ ಗಾಂಭೀರ್ಯ!

'ವಂಡರ್‌ಪುಟ'ದಲ್ಲಿ ಕತ್ತೆಯ ಎತ್ತರ ಮತ್ತು ಗಾಂಭೀರ್ಯಕ್ಕೆ ಮನಸೋತೆವು!

–ಚೈತ್ರಾ ಕುಕ್ಕೆಮನೆ, ಬೆಂಗಳೂರು/ ಎಚ್.ಆನಂದಕುಮಾರ್, ಚಿತ್ರದುರ್ಗ

## 'ಹೀಗೊಂದು...' ಭಿನ್ನ ಕಥೆ

ಡಾ. ಶಿರಗಾನಹಳ್ಳಿ ಶಾಂತನಾಯ್ಕರ 'ಹೀಗೊಂದು ವಸಂತ' ಕಥೆಯಲ್ಲಿ ಗ್ರಾಮಗಳಲ್ಲಿ ಮಾನವೀಯ ಮೌಲ್ಯ ಕಳಚಿಕೊಳ್ಳುತ್ತಿರುವದನ್ನು ಸಿಡಿಲು ಬಡಿದು ಒಣಗಿದ ಪಂಚಾಯ್ತಿ ಕಟ್ಟೆಯ 'ಬೇವಿನಮರ' ಸಂಕೇತಿಸುತ್ತದೆ. ಯೌವನವು ಹೆಣ್ಣಿಗೆ ಹೇಗೆಲ್ಲಾ ಸಂಕಟಗಳ ಸರಮಾಲೆಯ ಶರಪಂಜರ ಆಗಿದೆ ಎಂಬುದನ್ನು ಕತೆ ಪರಿಣಾಮಕಾರಿಯಾಗಿ ಹೇಳಿದೆ. ಇಡೀ ಗಂಡುಕುಲವೇ ಶೋಷಕರಲ್ಲ ಎಂಬುದನ್ನೂ ಕಥೆ ಹೇಳುವುದರಿಂದ ಕಥೆಗೆ ಸಂಕೀರ್ಣ ಆಯಾಮ ಪ್ರಾಪ್ತವಾಗಿದೆ.

–ಕೊಹಿಮ, ಬಸರಕೋಡು/ ರಾಜಶೇಖರ ಹಾದಿಮನಿ, ಧಾರವಾಡ/ ಬಿ.ಸಿದ್ದಲಿಂಗಪ್ಪ, ರೇಣುಕಾ ಪಾಟೀಲ, ದಾವಣಗೆರೆ

## ಅನಗತ್ಯ ಭಯ!

ಸೆಲೆಬ್ರಿಟಿ ವಿಭಾಗದಲ್ಲಿ ಏಂಜಲಿನಾ ಕುರಿತು ದಿಟ್ಟೆ ಎಂದು ಹನಿ ಬರೆದಿದ್ದಾರೆ. 'ದಿಟ್ಟೆ' ಏಂಜಲಿನಾ ಜೋಲಿಯವರು ಸಾವಿನಿಂದ ರಕ್ಷಣೆ ಪಡೆಯಲು ಒರಿಜಿನಲ್ ಸ್ತನಗಳೆರಡನ್ನೂ ತೆಗೆಸಿಕೊಂಡು, ದುಬಾರಿ ಕೃತಕ ಸ್ತನಗಳನ್ನು ಧರಿಸಿ, ರೋಚಕ ಲೇಖನವೊಂದನ್ನು ಬರೆದು ಜನಸಾಮಾನ್ಯರಲ್ಲಿ ಕ್ಯಾನ್ಸರ್ ಭಯವನ್ನು ತುಂಬಿದ್ದಾರೆ. ಇಷ್ಟಾದರೂ ಅವರಿಗೆ ಕ್ಯಾನ್ಸರ್ ಬರುವ ಸಂಭವ ಶೇ. 5 ರಷ್ಟಿದೆಯಂತೆ.

ಸಾವಿರ ಎಕರೆ ಜಮೀನಿನ, 35 ಬೆಡ್‌ರೂಂ ಮನೆಯ ಸುಂದರ ಹಾಲಿವುಡ್ ನಟಿ ಮಾಡಿದ್ದು ಅವರಿಗೆ ಸರಿ ಎನಿಸಬಹುದು. ತಲೆಯ ಮೇಲೆ ಸೂರೂ ಇಲ್ಲದ ನಮ್ಮ ದೇಶದ ಅನೇಕ ಮಹಿಳೆಯರಿಗೆ ಅವರ ಅನುಭವ ಹಂಚುವ ಅಗತ್ಯವಿಲ್ಲ!

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

## ಕವನ, ನಾಟಕ ಆಹ್ವಾನ

ಸಿ.ಪಿ.ಬ್ರೌನ್ ಸೇವಾ ಸಮಿತಿಯು ಕನ್ನಡ ಭಾಷಾಭಿಮಾನ ಪ್ರತಿನಿಧಿಸುವ ಕವನ, ನಾಟಕ ಸ್ಪರ್ಧೆಗೆ ಕೃತಿಗಳನ್ನು ಆಹ್ವಾನಿಸಿದೆ. ಕವನ ವಿಭಾಗಕ್ಕೆ ಕನಿಷ್ಠ 5 ಕವಿತೆಗಳನ್ನು ಕಳಿಸಬಹುದಾಗಿದೆ.

ನಾಟಕ ಒಂದು ತಾಸಿನ ಅವಧಿಯದಾಗಿರಬೇಕು, ಬರಹ 30ರಿಂದ 50 ಪುಟಗಳ ಒಳಗೆ ಇರಬೇಕು. ಯಾವುದೇ ಪತ್ರಿಕೆ, ಪುಸ್ತಕ, ವೆಬ್‌ಸೈಟ್, ಅಂತರ್ಜಾಲದಲ್ಲಿ ಕವನ ಅಥವಾ ನಾಟಕವನ್ನು ಕೃತಿಚೌರ್ಯ ಮಾಡಿಲ್ಲ ಎಂಬುದಕ್ಕೆ ಪ್ರಮಾಣಪತ್ರ ಲಗತ್ತಿಸಬೇಕು. ಹತ್ತು, ಐದು ಮತ್ತು ಮೂರು ಸಾವಿರ ರೂ.ಗಳ ಈ ಪ್ರಶಸ್ತಿಗೆ ಕೃತಿಗಳನ್ನು ಜುಲೈ 20ರ ಒಳಗಾಗಿ ನಂ.401 ಮದರ್‌ಲ್ಯಾಂಡ್, ಜೆ.ವಿ.ವಿ.ಹಿಂಭಾಗ, ಎಚ್‌ಆರ್‌ಬಿಆರ್ 3ನೇ ಹಂತ, ಬೆಂಗಳೂರು– 560084 ಈ ವಿಳಾಸಕ್ಕೆ ಕಳಿಸಿಕೊಡಲು ಕೋರಲಾಗಿದೆ.

